# ಶಿಕ್ಷಕ ಮತ್ತು ಶಿಕ್ಷಣ ತತ್ತ್ವಶಾಸ್ತ್ರ

**ಅನಾನಸ್ ಕುಮಾರ್**

**ಇಂದಿನ ಶಾಲಾ ಶಿಕ್ಷಣದ ಸಂದರ್ಭದಲ್ಲಿ ಶಿಕ್ಷಕನ ದುರ್ಬಲ ಸಿದ್ಧತೆ ಒಂದು ಗಂಭೀರವಾದ ವಿಷಯವಾಗಿದೆ. ಇದನ್ನು ಸಾಮಾನ್ಯವಾಗಿ ಶಿಕ್ಷಕ–ಶಿಕ್ಷಣದ ಅಪ್ರಸ್ತುತತೆ ಮತ್ತು ಸಂದರ್ಭರಾಹಿತ್ಯದೊಂದಿಗೆ ತಗಲುಹಾಕಿ ನೋಡಲಾಗುತ್ತದೆ. ಇದರ ಮೇಲೆ ಬಹಳಷ್ಟು ಚರ್ಚೆ ಕೂಡ ನ ನಡೆದಿದೆ. ಡಾ. ಕೆ. ಎಲ್ ಶ್ರೀಮಾಲಿ, ಹರ್ಬರ್ಟ್ ಸ್ಪೆನ್ಸರ್, ಆಚಾರ್ಯ ವಿನೋಬಾ ಭಾವೆ ಇವರುಗಳ– ಶಿಕ್ಷಣಕ್ಕೆ ಸಂಬಂಧಿಸಿದ ತಾತ್ವಿಕ ವಿಚಾರಗಳ ಬೆಳಕಿನಲ್ಲಿ ಈ ಬರಹವನ್ನು ಬರೆಯಲಾಗಿದೆ. ಶಿಕ್ಷಕ–ಶಿಕ್ಷಣದ ಪ್ರಮುಖ ಆಧಾರಗಳು ಯಾವುವು? ಒಬ್ಬ ಶಿಕ್ಷಕನಿಗೆ ಶಿಕ್ಷಣ ತತ್ವಶಾಸ್ತ್ರದ ಜ್ಞಾನ ಏಕೆ ಅಗತ್ಯವಾಗಿದೆಈ ಅವರ ಅಧ್ಯಾಪನ ಕಾರ್ಯವನ್ನು ಇನ್ನಷ್ಟು ಉತ್ತಮಪಡಿಸಿಕೊಳ್ಳುವಲ್ಲಿ ಅವರಿಗೆಈ ತಿಳುವಳಿಕೆಯು ಹೇಗೆ ನೆರವಾಗುತ್ತದೆ? ಈ ಲೇಖನದಲ್ಲಿ ಇಂಥದೇ ಕೆಲವು ಪ್ರಶ್ನೆಗಳ ಬಗ್ಗೆ ವಿಚಾರಮಾಡಲಾಗಿದೆ.**

ಶಿಕ್ಷಕನಾಗುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡ ಸಂದರ್ಭದಲ್ಲಿ ಓದು–ಬರಹದ ಕ್ರಮದಲ್ಲಿ ತತ್ತ್ವಶಾಸ್ತ್ರೀಯ, ಸಾಮಾಜಿಕ ಮತ್ತು ಮನೋವೈಜ್ಞಾನಿಕ – ಈ ಮೂರೂ ಶಿಕ್ಷಕ–ಶಿಕ್ಷಣದ ಪ್ರಮುಖ ಆಧಾರಗಳಾಗಿರುತ್ತವೆ ಎಂಬುದು ಅನುಭವಕ್ಕೆ ಬಂದಿದೆ. ಅವುಗಳಲ್ಲಿ ತತ್ತ್ವಶಾಸ್ತ್ರೀಯ(=ದಾರ್ಶನಿಕ) ಆಧಾರವು ಎಲ್ಲಕ್ಕಿಂತ ಪ್ರಾಚೀನವೂ ಮಹತ್ವಪೂರ್ಣವೂ ಆದ ಆಧಾರ. ವ್ಯಾವಹಾರಿಕ ಮತ್ತು ಬಿ. ಇಡಿ, ಎಂ. ಇಡಿ, ಡಿ. ಎಲ್. ಎಡ್ ಮೊದಲಾದ ಶಿಕ್ಷಕ ತರಬೇತಿ ತರಗತಿಗಳ ಬಗೆಗಿನ ಮಾತು–ಕತೆಯಲ್ಲಿ ಶಿಕ್ಷಣದ ಮನೋವೈಜ್ಞಾನಿಕ ಆಧಾರವನ್ನು ಪ್ರಮುಖವಾದದ್ದೆಂದು ತೋರಿಸುತ್ತಿದ್ದಾಗ್ಯೂ ನನ್ನ ತಿಳುವಳಿಕೆಗೆ ತತ್ತ್ವಶಾಸ್ತ್ರೀಯ ಆಧಾರವೇ ಹೆಚ್ಚು ಮಹತ್ವಪೂರ್ಣವಾದ ಆಧಾರವೆಂದು ಅನಿಸುತ್ತದೆ. ಕಾರಣ ಶಿಕ್ಷಕನ ಆಲೋಚನೆ ಮತ್ತು ನಡೆವಳಿಕೆಗೆ ಇದು ನೇರವಾಗಿ ಸಂಬಂಧಿಸಿದ್ದಾಗಿದೆ. ಇದರ ಆಳವಾದ ಪ್ರಭಾವ ಶಿಕ್ಷಣ ಕಾರ್ಯ ಮತ್ತು ಸ್ಥಳ ಎರಡರ ಮೇಲೂ ಬೀಳುತ್ತದೆ. ನನ್ನ ಈ ಲೇಖನದಲ್ಲಿ ಇದೇ ಅನುಭವವನ್ನು ಒಟ್ಟುಗೂಡಿಸಿಕೊಂಡು ಒಬ್ಬ ಶಿಕ್ಷಕನಿಗೆ ಶಿಕ್ಷಣ–ತತ್ವಶಾಸ್ತ್ರದ ಆವಶ್ಯಕತೆ ಮತ್ತು ಅದರ ಕಾರಣಗಳ ವಿಚಾರವಾಗಿ ಬರಯಲೆತ್ನಿಸಿದ್ದೇನೆ. ತನ್ನ ಇಡೀ ಶೈಕ್ಷಣಿಕ ಸೇವಾ ಜೀವನದ ಕಾಲದಲ್ಲಿ ಶಿಕ್ಷಕನಿಗೆ ಶಿಕ್ಷಣ ತತ್ವಶಾಸ್ತ್ರವನ್ನವಲಂಬಿಸಬೇಕಾದ ಅನೇಕ ಸಂದರ್ಭಗಳು ಒದಗಿಬರುತ್ತವೆ ಎಂಬುದು ನನ್ನ ತಿಳುವಳಿಕೆ.

### ಶಿಕ್ಷಣದ ಸ್ವರೂಪವನ್ನು ಗುರುತಿಸುವ ಕುರಿತು

ಶಿಕ್ಷಣ ಕ್ಷೇತ್ರಕ್ಕೆ ಪ್ರವೇಶಿಸಿದ ಮೇಲೆ ಅರ್ಥಾತ್ ಶಿಕ್ಷಕನಾದ ಮೇಲೆ ತನ್ನ ಕಾರ್ಯದಲ್ಲಿ ಅತ್ಯುನ್ನತವಾದ ಸಫಲತೆಯನ್ನು ಪಡೆದುಕೊಳ್ಳಬೇಕೆಂಬುದು ಪ್ರತಿಯೊಬ್ಬ ಶಿಕ್ಷಕನ ಆಸೆಯಾಗಿರುತ್ತದೆ. ಆದರೆ ಶಿಕ್ಷಣ ಶಾಸ್ತ್ರದ ಸೈದ್ಧಾಂತಿಕ ಮತ್ತು ವ್ಯಾವಹಾರಿಕ ಎರಡೂ ಕ್ಷೇತ್ರಗಳ ಅನುಭವ ಹೇಳುವುದೆಂದರೆ ಕಾರ್ಯದಲ್ಲಿ ಸಫಲತೆಯೆಂಬುದು ಕೇವಲ ಆಸೆ ಪಡುವುದರಿಂದ ಬರುವುದಿಲ್ಲ ಬದಲಿಗೆ ಅದು ಕಾರ್ಯದ ಸ್ವರೂಪವನ್ನೂ ಅವಲಂಬಿಸಿರುತ್ತದೆ. ಆದ್ದರಿಂದ ಶಿಕ್ಷಣದ ಸ್ವರೂಪವನ್ನು ಸರಿಯಾಗಿ ಗುರುತಿಸಿದಾಗಲೇ ಅವನು ತನ್ನ ಕಾರ್ಯದಲ್ಲಿ ಸಫಲನಾಗುತ್ತಾನೆ. ಹಾಗಾಗಿ ಶಿಕ್ಷಣದ ತತ್ವಶಾಸ್ತ್ರದ ಪರಿಚಯವನ್ನು ಮಾಡಿಕೊಳ್ಳುವುದು ಅವಶ್ಯಕವಾಗುತ್ತದೆ.

ಈಗಿನ ಶೈಕ್ಷಣಿಕ ಪರಿಸರ ಮತ್ತು ನೀತಿಯ ಸಂದರ್ಭದಲ್ಲಂತೂ ಶಿಕ್ಷಕ ಮತ್ತು ಶಿಕ್ಷಣ ತತ್ವಶಾಸ್ತ್ರ ಗಳೆರಡೂ ಸೈದ್ಧಾಂತಿಕವಾಗಿ ಒಂದು ಇನ್ನೊಂದರ ಹೊರತಾಗಿ ಅರ್ಥಂಬರ್ಥವೆನಿಸುತ್ತವೆ. ಆದರೆ ಒಬ್ಬ ಶಿಕ್ಷಕನ ಶಾಲಾ ಜೀವನದ ದೈನಿಕ ನಿ ಸತ್ವಪರೀಕ್ಷೆಯ ಕನ್ನಡಕದ ಮೂಲಕ ನೋಡಲೆತ್ನಿಸಿದಾಗ ಇವೆರಡೂ ಬೇರೆ ಬೇರೆಯಾಗಿ ಕಂಡುಬರುತ್ತವೆ. ಇದರ ಕಾರಣಗಳೆಂದು ಹಲವನ್ನು ಹೇಳಬಹುದಾದರೂ ಮೂರು ನಾಲ್ಕನ್ನು ಪ್ರಮುಖವಾಗಿ ಹೆಸರಿಸಬಹುದಾಗಿದೆ. ಉದಾಹರಣೆಗೆ ಶಿಕ್ಷಕನಾಗುವ ಸಮಯದಲ್ಲಿ ಪ್ರಾರಂಭದಿಂದಲೇ ಈ ವಿಷಯದ ಬಗ್ಗೆ ಗಂಭೀರವಾಗಿ ಗಮನ ಕೊಡದಿರುವುದು, ಶಿಕ್ಷಕನಾಗಿ ಕೆಲಸ ಮಾಡುವ ಸ್ಥಳದಲ್ಲಿ ನಾನಾ ಸವಾಲುಗಳನ್ನು ಎದುರಿಸಬೇಕಾಗಿ ಬಂದಾಗ ಗೊತ್ತಿದ್ದೋ ಗೊತ್ತಿಲ್ಲದೆಯೋ ಇದರ ಮೇಲಿನ ಗಮನ ಹೊರಟುಹೋಗುವುದು, ಸೇವಾ ಜೀವನದ ಸಂದರ್ಭದಲ್ಲಿ ಇದರ ಕುರಿತಾಗಿ ನಿರಂತರವಾಗಿ ಮಾತುಕತೆ ನಡೆಸುವ ವೇದಿಕೆಗಳು, ಅವಕಾಶಗಳು, ಮತ್ತು ರಚನಾತ್ಮಕ ಪ್ರಕ್ರಿಯೆಗಳ

ಅಭಾವ ಹಾಗೂ ಶಿಕ್ಷಕ ಸಹೋದ್ಯೋಗಿಗಳ ನಡುವೆ ಸತತವಾದ ಮತ್ತು ವ್ಯಾಪಕ ಸ್ವರೂಪದ ನಿಯಮಿತವಾದ ಮಾತುಕತೆಗಳ ಸಂದರ್ಭಗಳ ಕೊರತೆಯೇ ಮೊದಲಾದುವು.

**ತತ್ತ್ವಶಾಸ್ತ್ರ ಮತ್ತು ಜೀವನ ದರ್ಶನವನ್ನು ಆಯ್ಕೆಮಾಡುವ ಕುರಿತು**

ತನ್ನ ವೃತ್ತಿ ಜೀವನದಲ್ಲಿ ಪ್ರತಿಯೊಬ್ಬ ಶಿಕ್ಷಕನೂ ಒಂದಲ್ಲ ಒಂದು ವಿಷಯವನ್ನು ಬೋಧಿಸುತ್ತಾನೆ ಮತ್ತು ತನ್ನನ್ನು ಆ ವಿಷಯದ ವಿಶೇಷ ವ್ಯಾಖ್ಯಾನಕಾರ ಪ್ರವಕ್ತಾ, ಪ್ರಾಧ್ಯಾಪಕ ಇಲ್ಲವೆ ಅಧ್ಯಾಪಕ ಎಂದೆಲ್ಲ ಹೇಳಿಕೊಳ್ಳುವುದರಲ್ಲಿ ಹೆಮ್ಮೆಯ ಭಾವನೆ ಹೊಂದಿರುತ್ತಾನೆ. ಒಂದು ವೇಳೆ ನಾವು ಶಿಕ್ಷಕನ ಈ ವಿಚಾರದ ಆಳಕ್ಕೆ ಹೋಗಿ ನೋಡಿದರೆ ವಾಸ್ತವವಾಗಿ ಇದು ಹೆಮ್ಮೆಯ ವಿಷಯವಾಗುವುದಕ್ಕಿಂತ ಚಿಂತೆಯ ವಿಷಯವಾಗಿ ತೋರಿ ಬರುವುದೇ ಹೆಚ್ಚೆಂದು ತಿಳಿದು ಬರುತ್ತದೆ. ಕಾರಣ ಶಿಕ್ಷಕನು ಬದುಕಿನ ಶಿಕ್ಷಕನಾಗಬೇಕೇ ಹೊರತು ಯಾವುದೇ ವಿಷಯದ ಶಿಕ್ಷಕನಾಗುವುದಲ್ಲ. ಸುಪ್ರಸಿದ್ಧ ಪ್ರಾಕೃತಿಕ ) ತತ್ತ್ವಶಾಸ್ತ್ರಜ್ಞ ಹರ್ಬರ್ಟ್ ಸ್ಪೆನ್ಸರ್‌ನ "ಶಿಕ್ಷಣದ ಉದ್ದೇಶ ಪೂರ್ಣ ಜೀವನದ ಸಿದ್ಧತೆಗಾಗಿ"– ಎಂಬ ವಿಚಾರ ಧಾರೆಯೂ ಇದನ್ನು ಸಮರ್ಥಿಸುತ್ತದೆ. ಹಾಗಾಗಿ ಒಂದು ವೇಳೆ ಯಾವುದಾದರೊಂದು ವಿಷಯದಲ್ಲಿ ಉನ್ನತ ಶ್ರೇಣಿಯ ಪ್ರಕಾಂಡ ಪಂಡಿತನು ಕೂಡ ಉಕ್ತ ವಿಷಯವನ್ನು ಕಲಿಯುವ ವ್ಯಕ್ತಿಯ ಜೀವನದ ಸಮಸ್ಯೆಗಳ ಬಗ್ಗೆ ಅಪರಿಚಿತನಾಗಿದ್ದಾನೆಂದರೆ ಅವನನ್ನು ವಿಷಯ ತಜ್ಞ ಎಂದು ಎಂದಿಗೂ ಹೇಳಲಾಗುವುದಿಲ್ಲ.

**ವಿದ್ಯಾರ್ಥಿ ಸರ್ವಾಂಗೀಣ ವಿಕಾಸಕ್ಕಾಗಿ**

ಒಬ್ಬ ನಿಜವಾದ ಶಿಕ್ಷಕನ ಕಲಿಸುವಿಕೆಯು ಕಲಿಯಲು ಬಂದಿರುವ ವಿದ್ಯಾರ್ಥಿಯ ಜೀವನದಲ್ಲಿ ನಡೆದಿರಬಹುದಾದ ಸಂಪೂರ್ಣ ಜೀವನದ ಒಳ ಮಗ್ಗುಲುಗಳನ್ನು ಅರಿತುಕೊಳ್ಳುವದರಲ್ಲಿದೆ. ಅಲ್ಲದೆ ಅವನ ಜೀವನದ ಸಂದರ್ಭದಲ್ಲಿಯೇ ತನ್ನ ವಿಷಯವನ್ನು ಸಂಪೂರ್ಣ ಜ್ಞಾನದ ಒಂದು ಶಾಖೆಯೆಂಬಂತೆ ಅವನಿಗೆ ಬೋಧಿಸುವುದರಲ್ಲಿದೆ. ಆ ರೀತಿಯಲ್ಲಿ ಕಲಿಸಿದ ವಿದ್ಯೆ ಮುಂದಿನ ಜೀವನವನ್ನು ಬ ಬದುಕುವಲ್ಲಿ ಅವನಿಗೆ ನೆರವಾಗಬೇಕು. ಹೀಗಿದ್ದಾಗಲೇ ಅವನೊಬ್ಬ ಯಶಸ್ವೀ ಶಿಕ್ಷಕನೆನಿಸಿಕೊಳ್ಳುತ್ತಾನೆಯೇ ಹೊರತು ಬೇರೆ ರೀತಿಯಲ್ಲಿ ಅಲ್ಲ. ಜೀವನದ ಒಳ ಮಗ್ಗುಲುಗಳು ಮತ್ತು ಅದರ ಸಂಬಂಧಗಳ ತಿಳಿವು ಮತ್ತು ಅದನ್ನು ಪಾಠ ಮಾಡುವ ವಿಧಾನಗಳು ಶಿಕ್ಷಣ ತತ್ವ ಶಾಸ್ತ್ರದ ಅಧ್ಯಯನದಿಂದ ಪ್ರಾಪ್ತವಾಗುತ್ತವೆ. ಆ ಶಿಕ್ಷಣ ತತ್ವಶಾಸ್ತ್ರವು ಶಿಕ್ಷಕನನ್ನು ನಿಜವಾದ ತತ್ವಶಾಸ್ತ್ರಜ್ಞನನ್ನಾಗಿ(=ದಾರ್ಶನಿಕನನ್ನಾಗಿ) ಮತ್ತು ಅವನು ನೀಡುವ ಶಿಕ್ಷಣವನ್ನು ವ್ಯಾವಹಾರಿಕ ಮತ್ತು ದೈನಂದಿನ ಜೀವನದಲ್ಲಿ ಉಪಯೋಗಕ್ಕೆ ಬರುವ ಶಿಕ್ಷಣವನ್ನಾಗಿ ಮಾಡಲು ಸಾಧ್ಯ.

ಇದರ ಹೊರತಾಗಿ ವಿದ್ಯಾರ್ಥಿಯ ಈ ಸರ್ವಾಂಗೀಣ ವಿಕಾಸದಲ್ಲಿ ಯಾವ ಯಾವ ತತ್ವಗಳು ಬರುತ್ತವೆ ಮತ್ತು ವ್ಯಕ್ತಿತ್ವದ ಯಾವ ಯಾವ ಪಾರ್ಶ್ವಗಳ ಮೇಲೆ ವಿಶೇಷ ಒತ್ತುಕೊಡಬೇಕಾಗುತ್ತದೆಂಬುದರ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದರಲ್ಲೂ ಶಿಕ್ಷಣ ತತ್ವ ಶಾಸ್ತ್ರವು ನೆರವಾಗುತ್ತದೆ.

**ಶಿಕ್ಷಣದ ಉದ್ದೇಶ, ಪಠ್ಯಕ್ರಮ ಮತ್ತು ಶೈಕ್ಷಣಿಕ ಕಾನೂನುಗಳ ತಿಳಿವಿಗಾಗಿ**

ಅನೇಕ ಕಾರಣಗಳಿಂದ ಇಂದಿನ ಶಿಕ್ಷಕ ಹೆಚ್ಚಾಗಿ ತನ್ನ ವಿಭಾಗವನ್ನು ನಿಂದಿಸುತ್ತ ಯಾಂತ್ರಿಕವಾಗಿ ಕೆಲಸ ಮಾಡುತ್ತಿರುತ್ತಾನೆ. ಅಷ್ಟೇ ಅಲ್ಲ; ’(=ಕಛೇರಿ) ಕೆಲಸದ ಬಾಹುಳ್ಯದಿಂದ (ಮಾನಸಿಕ) ಒತ್ತಡದಿಂದ ಕೂಡಿದವನಾಗಿದ್ದು ಮಕ್ಕಳ ಬಂಗರದಂಥ ಭವಿಷ್ಯದ ಸಲುವಾಗಿ ನೀಡಲಾಗುವ ಅಂತರ್ ತರಗತಿಯ ಪ್ರಕ್ರಿಯೆಯನ್ನು ರೋಚಕವಾಗಿರುವಂತೆ ಮಾಡುವ ಬದಲು ಹೊರೆಯಾಗುವಂತೆ ಮಾಡುತ್ತಿದ್ದಾನೆ. ಅದರ ಫಲವಾಗಿ ಕಲಿಯಲು ಬಂದಿರುವ ಮಕ್ಕಳು ಶಿಕ್ಷಣದಿಂದ ವಿಮುಖರಾಗುವುದಂತೂ ಇದ್ದದ್ದೇ; ಶಿಕ್ಷಕರಿಗೂ ತಮ್ಮ ಕೆಲಸದ ಸಮಸ್ಯೆಗಳ ಅನುಭವವಾಗುವುದಿಲ್ಲ ಮಾತ್ರವಲ್ಲ; ಅದರ ವಿಷಯದಲ್ಲಿ ವಿಚಾರ ಮಾಡಲು ಪ್ರೇರಣೆಯೂ ದೊರೆಯುವುದಿಲ್ಲ. ಇಂಥ ಒಂದು ಸ್ಥಿತಿಯಲ್ಲಿ ಶಿಕ್ಷಕನಿಗೆ ಶಿಕ್ಷಣ ತತ್ವ ಶಾಸ್ತ್ರವು ಶಿಕ್ಷಣದ ಸ್ವರೂಪವನ್ನು ನಿಶ್ಚಿತ ಪಡಿಸುತ್ತ ಶಿಕ್ಷಣದ ಎಲ್ಲ ಮಗ್ಗುಲುಗಳ ಬಗ್ಗೆ ವಿಚಾರ ಮಾಡುತ್ತದೆ. ಶಿಕ್ಷಣದ ಉದ್ದೇಶವೇನಾಗಿರಬೇಕು, ಈ ಉದ್ದೇಶವನ್ನು ಈಡೇರಿಸಿಕೊಳ್ಳಲು

ಯಾವ ಬಗೆಯ ಪಠ್ಯಕ್ರಮವನ್ನು ನಿಗದಿಪಡಿಸಬೇಕು, ಉದ್ದೇಶದ ಸಾಧನೆಗಾಗಿ ಪಾಠಮಾಡಬೇಕಾದ ಕ್ರಮ ಹೇಗಿರಬೇಕು? ಈ ಎಲ್ಲ ವಿಷಯಗಳ ಬಗ್ಗೆಯೂ ಶಿಕ್ಷಣ ತತ್ವಶಾಸ್ತ್ರದಲ್ಲಿ ವಿಚಾರಮಾಡಲಾಗುತ್ತದೆ.

ಯೋಗ್ಯನಾದ ಶಿಕ್ಷಕನು ಸದಾ ಕಾಲ ತನ್ನ ಶಿಕ್ಷಣ ಪದ್ಧತಿಯಲ್ಲಿ ಪರಿಸ್ಥಿತಿಗೆ ತಕ್ಕಂತೆ ಬದಲಾವಣೆ ಮಾಡುತ್ತಾನೆ. ಕಾರಣ, ಅವನು ಯಾವುದೇ ಒಂದು ಪದ್ಧತಿ ಎಲ್ಲ ಸಂದರ್ಭಗಳಲ್ಲೂ ಉಪಯುಕ್ತವಾಗುವುದಿಲ್ಲ ಎಂಬ ವಿಚಾರದ ಪರವಾಗಿರುತ್ತಾನೆ. ಒಂದು ವೇಳೆ ಹಾಗಿದ್ದರೆ ಬೇರೆ ಬೇರೆ ಶಿಕ್ಷಣದ ಪದ್ಧತಿಗಳನ್ನು ರೂಪಿಸುತ್ತಿರಲಿಲ್ಲ. ಶಿಕ್ಷಣ ಪದ್ಧತಿಗಳಲ್ಲಿ ಸತತವಾಗಿ ಬದಲಾವಣೆಗಳನ್ನು ತರಬೇಕೆಂಬ ಇಚ್ಛೆಯುಳ್ಳ ಶಿಕ್ಷಕರಿಗೆ ಕೂಡ ಶಿಕ್ಷಣ ತತ್ವ ಶಾಸ್ತ್ರವು ನೆರವು ನೀಡುವಲ್ಲಿ' ಸ ಸಹಾಯಕವಾಗಿರುತ್ತದೆ ಎಂಬುದು ಸ ಸಾಬೀತಾಗಿದೆ .

ಶಿಕ್ಷಣ ಪದ್ಧತಿಗಳಲ್ಲಿ ಬದಲಾವಣೆ ತರುವ ಬಗ್ಗೆ ವಿನೋಬಾ ಭಾವೆ ಹೀಗೆ ಬರೆಯುತ್ತಾರೆ–" ನಾವು ಫ್ರೊಬಲ್, ಪೆಸ್ಟಾಲಜಿ ಅಥವಾ ಮಾಂಟೆಸ್ಸೊರಿ ಪದ್ಧತಿಯ ಶಿಕ್ಷಣ ನೀಡುತ್ತಿದ್ದೇವೆ ಎಂದು ನಿಮಗೆ ಹೇಳಿದರೆ ಇದು ಕೇವಲ ಮಾತಿನ ವ್ಯರ್ಥಾಲಾಪ ಅಷ್ಟೆ, ಇದು ಕೇವಲ ಶಾಬ್ದಿಕ ಶಿಕ್ಷಣವಾಗುತ್ತದೆ. . ಇದು ಯಾವುದೇ ಪದ್ಧತಿಯ ಅರ್ಥಶೂನ್ಯವಾದ ನಕಲು, ಇದು ಪ್ರಾಣವಿಲ್ಲದ ದೇಹ ಮಾತ್ರ ಎಂದು ತಿಳಿದು ನಕ್ಕುಬಿಡಿ. ಫಾರ್ಮುಲವನ್ನು ಅಳವಡಿಸಿದಾಕ್ಷಣಕ್ಕೇ ಉತ್ತರ ದೊರೆತುಬಿಡಲು ಶಿಕ್ಷಣಕ್ಕೆ ಯಾವುದೇ ಬೀಜ ಗಣಿತದ ಸಿದ್ಧ ಸೂತ್ರ ಇಲ್ಲ.ಇಂದು ನೀಡಲಾಗುತ್ತಿರುವ ಶಿಕ್ಷಣ ಶಿಕ್ಷಣವೇ ಅಲ್ಲ ಮತ್ತು ಅದನ್ನು ನೀಡುವ ಈಗಿನ ಶಿಕ್ಷಣ ಪದ್ಧತಿ ವಾಸ್ತವವಾದ ಪದ್ಧತಿಯೂ ಅಲ್ಲ. "ಒಳಗೆ ಏನಿದೆ ಅದು ಸಹಜವಾಗಿಯೇ ಪ್ರಕಟವಾಗುತ್ತದೆ– ಹೀಗೆ ಸಹಜವಾಗಿ ಹೊರಬರುವುದೇನಿದೆ ಅದೇ ಶಿಕ್ಷಣ"

**ಶಿಕ್ಷಣ ಪದ್ಧತಿಯಲ್ಲಿ ಬರುವ ಕಾಲಕಾಲಕ್ಕೆ ಕಾಣಿಸಿಕೊಳ್ಳುವ ದೋಷ ನಿವಾರಣೆಯ ಕುರಿತು**

ನನ್ನ ಕಾರ್ಯಕ್ಷೇತ್ರದಲ್ಲಿ ಸಂಚಾರ ಮಾಡುವ ಸಂದರ್ಭದಲ್ಲಿ ಔಪಚಾರಿಕ ಮತ್ತು ಅನೌಪಚಾರಿಕ ವೇದಿಕೆಗಳ ಮೇಲೆ ಶಿಕ್ಷಕರೊಂದಿಗೆ ನಡೆಸುತ್ತಿರುವ ಮಾತು–ಕತೆಗಳಿಂದ – ಇಂದಿಗೂ ಸಹ ಬಹಳಷ್ಟು ಜನ ಶಿಕ್ಷಕರಿಗೆ ಶಿಕ್ಷಣದ ವಾಸ್ತವಿಕ ಸಮಸ್ಯೆಗಳೇನೆಂದೇ ತಿಳಿದಿಲ್ಲ– ಎಂದು ತಿಳಿದುಬಂದಿದೆ. ಅಂದರೆ –"ಈಗ ಹೇಗೆ ನಡೆಯುತ್ತಾ ಇದೆಯೋ ಅದೇ ಸರಿಯಾಗಿದೆ' ಎಂದು ಅವರುಗಳು ಯೋಚಿಸುತ್ತಿರುವುದು ಮತ್ತು ಹೇಳುತ್ತಿರುದು ಕಂಡುಬರುತ್ತಿದೆ. ಹೀಗೆ ಹೇಳುತ್ತಿರುವಾಗ ಅವರುಗಳು, ಯಾವ ರೀತಿ ಪ್ರತಿಯೊಂದು ಪ್ರಕ್ರಿಯೆಯಲ್ಲೂ ಗುಣ– ದೋಷಗಳು ಇರುತ್ತವೆಯೋ ಹಾಗೆಯೇ ಶಿಕ್ಷಣವೆಂಬ ಈ ಸಹಜೀವಿ(ಜೊತೆಯಲ್ಲಿ ಬದುಕುವ) ಪ್ರಕ್ರಿಯೆಯಲ್ಲೂ ಕಾಲದ ಪ್ರವಾಹದೊಂದಿಗೆ ಕೆಲವೊಂದು ದೋಷಗಳೂ ಬಂದುಬಿಡುತ್ತವೆ" ಎಂಬ ವಿಚಾರದ ಅರಿವಿದ್ದಂಥವರಾಗಿರುವುದಿಲ್ಲ. ಶಿಕ್ಷಣದ ಮೇಲೂ ದೇಶ ಮತ್ತು ಕಾಲಕ್ಕೆಅನುಗುಣವಾಗಿ ಪ್ರಭಾವ ಬೀಳುತ್ತ ಇರುತ್ತದೆ ಮತ್ತು ಸಾಮಾಜಿಕ ಇಲ್ಲವೆ ರಾಜಕೀಯ ಕಾರಣಗಳಿಂದಾಗಿ ಪರಂಪರಾಗತ ಪದ್ಧತಿ ಬಹಳ ದಿನಗಳವರೆಗೂ ಚಾಲನೆಯಲ್ಲಿರುತ್ತದೆ. ಒಂದೇ ಪದ್ಧತಿಯು ನಿರಂತರವಾಗಿ ಚಾಲನೆಯಲ್ಲಿರುವುದರಿಂದ ಅದರಲ್ಲಿ ಅನೇಕ ದೋಷಗಳು ಹುಟ್ಟಿಕೊಳ್ಳುತ್ತವೆ. ಒಬ್ಬ ಎಚ್ಚೆತ್ತ ಶಿಕ್ಷಕ ಅಥವಾ ಎಚ್ಚೆತ್ತ ನಾಗರಿಕನ ರೂಪದಲ್ಲಿ ಶಿಕ್ಷಣದ ಈ ಗುಣ–ದೋಷಗಳನ್ನು ತಿಳಿದುಕೊಳ್ಳುತ್ತ ಇದನ್ನು ತಿರಸ್ಕರಿಸುವುದಕ್ಕಾಗಿ ಪ್ರಯತ್ನ ಮಾಡುತ್ತಿರುವುದು ಕೂಡ ಅತ್ಯಂತ ಅವಶ್ಯಕ. ಈ ಗುಣ ದೋಷಗಳ ವಿಶ್ಲೇಷಣೆ ಮತ್ತು ಇದರ ಸುಧಾರಣೆಯ ಮಾರ್ಗೋಪಾಯಗಳನ್ನು ಸೂಚಿಸುವುದು ಮತ್ತು ಅದರ ಬೇರೆ ಬೇರೆ ಕಾರಣ–ಪರಿಣಾಮಗಳನ್ನು ಆಳವಾಗಿ ತಿಳಿದುಕೊಳ್ಳುವುದರಲ್ಲಿ ಕೂಡ ಶಿಕ್ಷಣ ತತ್ತ್ವಶಾಸ್ತ್ರವು ತನ್ನ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ.

**ಶಿಕ್ಷಣದಲ್ಲಿ ಕಾಲದಿಂದ ಕಾಲಕ್ಕೆ ಆಗುವ ಬದಲಾವಣೆಯ ಮಹತ್ವವನ್ನು ತಿಳಿಯುವ ಕುರಿತು**

ಶಿಕ್ಷಣದಲ್ಲಿ ಕಾಣಿಸಿಕೊಂಡಿರುವ ಕಾಲ ಕಾಲಕ್ಕೆ ಉಂಟಾಗುವ ದೋಷಗಳ ಸುಧಾರಣೆಯ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿರುತ್ತದೆ ಮತ್ತು ನಮ್ಮ ದೇಶದ ಸಂದರ್ಭದಲ್ಲಂತೂ 'ಶಿಕ್ಷಣ ಸುಧಾರಣೆ'ಯ ಘೋಷಣೆಯನ್ನು ಇನ್ನಷ್ಟು ಜೋರು ಜೋರಾಗಿ ಮಾಡಲಾಗುತ್ತಿದೆ. ಸ್ವಾತಂತ್ರ್ಯ ಬಂದ ನಂತರಲ್ಲಿ ರಚಿತವಾದ ರಾಧಾಕೃಷ್ಣನ್ ಸಮಿತಿಯಿಂದ ತೊಡಗಿ, ಮೊದಲಿಯಾರ್ ಆಯೋಗ, ಕೊಠಾರಿ ಆಯೋಗ, ಪ್ರೊ. ಯಶಪಾಲ್ ಸಮಿತಿ ಮುಂತಾದವುಗಳ ಶಿಫಾರಸುಗಳನ್ನು ಜಾರಿಗೆ ತರುವುದನ್ನೇಇಂದಿಗೂ ನಿರೀಕ್ಷಿಸಲಾಗುತ್ತಿದೆ. ಈ ಎಲ್ಲವುಗಳ ಕೆಲಸ ಮತ್ತು ಉದ್ದೇಶ

ಹೆಚ್ಚುಕಡಿಮೆ ಒಂದೇ ಆಗಿದ್ದರೂ ಕೂಡ ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ಅಂದುಕೊಂಡದ್ದಕ್ಕಿಂತ ಕಡಿಮೆ ಸುಧಾರಣೆ ಆಗಿದೆ. ಈ ರೀತಿ ತೀರಾ ಕಡಿಮೆ ಸುಧಾರಣೆಗಳಿಗೇನು ಕಾರಣ ಎಂಬುದನ್ನು ನಾವು ಸರಿಯಾಗಿ ವಿಶ್ಲೇಷಿಸಿ ನೋಡಿದರೆ –ಈ ಎಲ್ಲ ಪ್ರಯತ್ನಗಳಲ್ಲೂ ಶಿಕ್ಷಕರನ್ನು ಮತ್ತು ಅವರ ದೃಷ್ಟಿಕೋನಗಳನ್ನು ಬದಲಾಯಿಸುವ ವಿಷಯ ಮತ್ತು ಪ್ರಕ್ರಿಯೆಯನ್ನು ಮಾತುಕತೆಯ ಕೇಂದ್ರದಿಂದ ಸಾಕಷ್ಟು ದೂರವೇ ಇರಿಸಲಾಗಿದೆ ಎಂದು ತಿಳಿದುಬರುತ್ತದೆ. ಇದು ಯಾವ ದೃಷ್ಟಿಯಿಂದ ನೋಡಿದರೂ ಉಚಿತವೆನಿಸುವುದಿಲ್ಲ. ಇದೇ ಕಾರಣದಿಂದಲೇ ಶಿಕ್ಷಕನ ದೃಷ್ಟಿಕೋಣ ಬದಲಾಗದ ಹೊರತು ಶಿಕ್ಷಣ ಸುಧಾರಣೆಯ ಯಾವ ಯೋಜನೆಯೂ ಸಫಲವಾಗುವುದಿಲ್ಲ. ಶಿಕ್ಷಕ, ಶಿಕ್ಷಣ ಸುಧಾರಣೆಯ ಕೀಲು, ಅಕ್ಷ. ಈ ಕೀಲು ಸಿದ್ಧಗೊಳ್ಳುವುದು ಶಿಕ್ಷಣ ತತ್ತ್ವಶಾಸ್ತ್ರದಿಂದ. ಶಿಕ್ಷಣ ತತ್ತ್ವಶಾಸ್ತ್ರದ ಅಧ್ಯಯನ ಶಿಕ್ಷಕನಿಗೆ ಶಿಕ್ಷಣದಲ್ಲಿ ಸುಧಾರಣೆ ಇಲ್ಲವೆ ಕಾಲದಿಂದ ಕಾಲಕ್ಕೆ ಆಗಬೇಕಾದ ಬದಲಾವಣೆಯ ಮಹತ್ವವನ್ನು ತಿಳಿದುಕೊಳ್ಳುವಲ್ಲಿ ನೆರವಾಗುತ್ತದೆ.

**ವಿಭಿನ್ನ ವಿಷಯಗಳ ಪಠ್ಯಕ್ರಮ– ಸಮನ್ವಯ ಸಂಬಂಧದ ಜ್ಞಾನದ ಕುರಿತು**

ಭಾರತದಲ್ಲಿ ಇಂದಿಗೂ ಬಹಳಷ್ಟು ಶಿಕ್ಷಕರು ಗಡಿಯಾರಕ್ಕೆ ಬದ್ಧರಾಗಿ ಇಲ್ಲವೆ ಮನಸ್ಸಿಗೆ ಬಂದಂತೆ ತರಗತಿಗೆ ಹೋಗಿ ಕೇವಲ ಪಾಠ ಮಾಡುವುದು ತಮ್ಮ ಕರ್ತವ್ಯವೆಂದು ತಿಳಿದಿದ್ದಾರೆ. ದೇಶದ ಶಿಕ್ಷಣದ ಇಂಥ ಕೆಲಸವನ್ನು ವ್ಯಾಖ್ಯಾನಿಸುತ್ತ –"ದೇಶದ ಸಾಂಸ್ಕೃತಿಕ ಪರಂಪರೆಯ ಮೂಲಭೂತ ತತ್ತ್ವಗಳನ್ನು ಕಂಡುಹಿಡಿಯುವುದು ಮತ್ತು ಈಗಿನ ಪರಿಸ್ಥಿತಿಯಲ್ಲಿ ಅವುಗಳನ್ನು ಯಾವ ಹಂತದ ವರೆಗೆ ಅನ್ವಯಿಸಬಹುದು ಎಂಬುದನ್ನು ನೋಡುವುದು ಭಾರತದ ಶಿಕ್ಷಣದ ಕೆಲಸವಾಗಿದೆ". ಎಂದು ಡಾ. ಕೆ. ಎಲ್. ಶ್ರೀಮಾಲಿಯವರು ಹೇಳುತ್ತಾರೆ.

ಶಿಕ್ಷಣವು ಸದಾಕಾಲ ಸಹಜವಾಗಿ ನಡೆಯಬೇಕು. ಪಾಠ ಮಾಡುವ ಸಮಯದಲ್ಲಿ –ವಿದ್ಯಾರ್ಥಿಗಳು ತಮ್ಮ ಸಂಪರ್ಕಕ್ಕೆ ಬರುತ್ತಿದ್ದ ಹಾಗೆಯೇ ಶಿಕ್ಷಣವನ್ನು ಗ್ರಹಿಸುವ ರೀತಿಯಲ್ಲಿ ಶಿಕ್ಷಕರು ಸದಾ ತಮ್ಮ ದೃಷ್ಟಿಕೋನವನ್ನು ಮತ್ತು ತಮ್ಮ ನಡವಳಿಕೆಯನ್ನು ರೂಪಿಸಿಕೊಳ್ಳಬೇಕು. ಈ ಪರಿಸ್ಥಿತಿಗಳಲ್ಲಿ ಶಿಕ್ಷಣ ತತ್ತ್ವಶಾಸ್ತ್ರವು ಸಾಮಾನ್ಯವಾಗಿ ಜ್ಞಾನದ ಬೇರೆ ಬೇರೆ ವಿಷಯಗಳಲ್ಲಿ ಮತ್ತು ವಿಶೇಷವಾಗಿ ಶಿಕ್ಷಣದ ವಿಭಿನ್ನ ಶಾಖೆಗಳ ನಡುವೆ ಸಮನ್ವಯವನ್ನು ಸ್ಥಾಪಿಸುವಲ್ಲಿ ಕೂಡ ಹೆಚ್ಚಿನ ಹಂತದ ವರೆಗೆ ಶಿಕ್ಷಕನಿಗೆ ನೆರವಾಗುತ್ತದೆ. ಒಂದು ವೇಳೆ ಈ ಸಮನ್ವಯದ ಕಡೆಗೆ ಗಮನ ಕೊಡದಿದ್ದರೆ ಶಿಕ್ಷಕನ ಕೆಲಸ ಪ್ರಭಾವವನ್ನು ಕಳೆದುಕೊಳ್ಳಲಾರಂಭಿಸುತ್ತದೆ. ಆದ್ದರಿಂದಲೇ –" ಯಾವ ಶಿಕ್ಷಕರು ಶಿಕ್ಷಣ ತತ್ತ್ವಶಾಸ್ತ್ರವನ್ನು ಅಲಕ್ಷಿಸುತ್ತಾರೋ ಅವರು ತಮ್ಮ ಕೆಲಸವನ್ನು ಪ್ರಭಾವ ರಹಿತವನ್ನದನಾಗಿ ಮಾಡುವ ಮೂಲಕ ಈ ಅಲಕ್ಷ್ಯಕ್ಕೆ ದಂಡವನ್ನು ತೆರಬೇಕಾಗುತ್ತದೆ." ಎಂದು ರಸ್ಕಿನ್ ಹೇಳಿದ್ದಾನೆ.

ಶಿಕ್ಷಣ ತತ್ತ್ವ ಶಾಸ್ತ್ರವು ಶಿಕ್ಷಕನಿಗೆ ಆಚಾರ್ಯನಾಗಲು ನೆರವು ನೀಡುತ್ತದೆ ಮತ್ತು ಬಾಡಿಗೆಯ ಗುರುವಾಗುವುದಕ್ಕಿಂತ ನಿಜವಾದ ಗುರುವಾಗಲು ಪ್ರೇರಣೆ ನೀಡುತ್ತದೆ. ಶಿಕ್ಷಣದ ಸಫಲತೆಗಾಗಿ ಶಿಕ್ಷಕನನ್ನು ಶಿಕ್ಷಣ ತತ್ವಶಾಸ್ತ್ರಜ್ಞ(= 'ನ್ನಾಗಿ ಮಾಡಲೇಬೇಕಾಗುತ್ತದೆಂಬ ಕಾರಣಕ್ಕಾಗಿ ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕನಿಗೆ ಎದುರಾಗುವ ದಿನ ನಿತ್ಯದ, ಪರಿಹರಿಸಲಶಕ್ಯವಾದ ಸಮಸ್ಯೆಗಳನ್ನು ಅದು ಸೂಚಿಸುತ್ತಿರುತ್ತದೆ. " ಹೀಗೆ ಶಿಕ್ಷಕನಿಗೆ ಯಾವುದಾದರೂ ಶಿಕ್ಷಣ ತತ್ತ್ವಶಾಸ್ತ್ರವು ಅತ್ಯವಶ್ಯಕವಾಗಿ ಇರಲೇಬೇಕು, ಇದಿಷ್ಟೇ ಅಲ್ಲ, ಶಿಕ್ಷಕನು ವಿದ್ಯಾರ್ಥಿಗಳಲ್ಲಿ ಜೀವನ ದರ್ಶನವನ್ನು ವಿಕಾಸಗೊಳಿಸುವ ಸಲುವಾಗಿ ಸಿದ್ಧನಾಗಿ ಈ ಉದ್ಯಮದಲ್ಲಿ ಪ್ರವೇಶಿಸಬೇಕು"–ಎಂಬ ಡಾ. ಕೆ. ಎಲ್. ಶ್ರೀಮಾಲಿಯವರ ಮಾತು ಅತ್ಯಂತ ಸಾಂದರ್ಭಿಕವೆನಿಸುತ್ತದೆ.

ಕೊನೆಯದಾಗಿ ನ ನನ್ನ ತಿಳಿವಳಿಕೆಯ ಪ್ರಕಾರ ಒಬ್ಬ ನಿಜವಾದ ಶಿಕ್ಷಕನು ನಿಜವಾದ ದಾರ್ಶನಿಕನೂ ಆಗಿರುತ್ತಾನೆ. ಅವನು ನಿರಂತರವಾಗಿ ಶಿಕ್ಷಣ ತತ್ತ್ವಶಾಸ್ತ್ರದ ವಿಭಿನ್ನ ದೃಷ್ಟಿಕೋಣಗಳನ್ನು ಅಧ್ಯಯನ ಮಡಿ ಶಿಕ್ಷಣದ ಗುರಿಗಳನ್ನು ಈಡೇರಿಸಿಕೊಳ್ಳುವ ಸಲುವಾಗಿ ಮಕ್ಕಳ ಶಿಕ್ಷಣದ ವಾಸ್ತವಿಕ ಸ್ವರೂಪವನ್ನು ನಿರ್ಧರಿಸುವ ಪ್ರಯತ್ನ ಮಾಡುತ್ತಾನೆ. ಒಬ್ಬ ಶಿಕ್ಷಕನಿಗೆ ಶಿಕ್ಷಣ ವಿಜ್ಞಾನದಿಂದಲೂ ಬಹಳಷ್ಟು ನೆರವು ಸಿಗುವುದರ ಜೊತೆಗೆ ಅವನು ಅನೇಕ ಸಮಸ್ಯೆಗಳನ್ನು ಶಿಕ್ಷಣ ವಿಜ್ಞಾನದ ನೆರವಿನಿಂದ ಪರಿಹರಿಸಿಕೊಳ್ಳಬಲ್ಲನಾದರೂ ಶಿಕ್ಷಣ ತತ್ತ್ವಶಾಸ್ತ್ರದ ಹೊರತು ಯಶಸ್ವೀ ಶಿಕ್ಷಕನಾಗುವುದು ಸಂದೇಹವೇ.

**ಸಂದರ್ಭ:**

**ಆಚಾರ್ಯ ವಿನೋಬಾ ಭಾವೆ(1972), ಶಿಕ್ಷಣ–ವಿಚಾರ, ಸರ್ವಸೇವಾ ಸಂಘ, ಪ್ರಕಾಶನ, ವಾರಣಾಸಿ**

**ಜೇಮ್ಸ್. ಎಸ್. ರಾಸ್.(1972), ಶಿಕ್ಷಣ ಸಿದ್ಧಾಂತ ಕೆ ಮೂಲ ಆಧಾರ್, ರಾಮನಗರ್, ಎಸ್,ಚಂದ್ ಅಂಡ್ ಕಂಪನಿ, ನಯೀ ದಿಲ್ಲೀ**

**ಆರ್. ಆರ್, ರಸ್ಕ್ (1956), ದಿ ಫಿಲಸಾಪಿಕಲ್ ಬೇಸಿಕ್ ಆಫ್ ಎಜುಕೇಶನ್, ಯೂನಿವರ್ಸಿಟಿ ಆಫ್ ಲಂಡನ್ ಪ್ರೆಸ್, ಲಂಡನ್**

**ಆರ್. ಆರ್, ರಸ್ಕ್(1972), ಶಿಕ್ಷಾ ಕೇ ದಾರ್ಶನಿಕ್ ಆಧಾರ್, ಹಿಂದೀ ಗ್ರಂಥ್ ಅಕಾದಮೀ, ಜಯಪುರ**

**ಕೆ. ಎಲ್. ಶ್ರಿಮಾಲಿ(1965), ಎಜುಕೇಶನ್ ಇನ್ ಛೇಂಜಿಂಗ್ ಇಂಡಿಯಾ, ಏಷಿಯಾ ಪಬ್ಲಿಷಿಂಗ್ ಹೌಸ್, ದಿಲ್ಲೀ**

**ಸರ್ವಪಲ್ಲೀ ರಾಧಾಕೃಷ್ಣನ್(2007), ಧರ್ಮ ಔರ್ ಸಮಾಜ್, ರೀಡ್ ಬುಕ್ಸ್**

**ವಿಭಿನ್ನ ವಿಶ್ವ ವಿದ್ಯಾಲಯಗಳ ಬಿ. ಎಡ್, ಎಂ. ಎಡ್, ಪಠ್ಯಕ್ರಮಗಳು**

---

ಅನಾನಸ್ ಕುಮಾರ್ ಒಂದೂವರೆ ದಶಕದಿಂದ ಗ್ರಾಮೀಣ ಶಿಕ್ಷಣ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದಾರೆ. ಸದ್ದಲ್ಲಿ ಅಜೀಮ್ ಪ್ರೇಮ್ ಜೀ ಫೌಂಡೇಷನ್ ನ ಸಂಶೋಧನ ವಿಭಾಗದಲ್ಲಿ ಸೇರಿಕೊಂಡು ಕೆಲಸ ಮಾಉತ್ತಿದ್ದಾರೆ.

ಸಂಪರ್ಕ: ananas.kumar@azimpremjifoundation.org.